PRESS INFORMATION BUREAU
GOVERNMENT OF INDIA
BENGALURU
****

| Name of the Paper | Praja Vani |
|---|---|
| Language: Kannada | Date 29-10-18 |
| Place :Bangalore | Periodicity: Daily |
| Clipping on_ Sardar Patel Statue | |
| Headline_ sardar patel statue will be the biggest in the world | |



# ಸರ್ದಾರ್ ಪಟೇಲ್ ಪ್ರತಿಮೆಗಳಿಗೂ ಸರದಾರ

## ಏಕತೆ ಸಾರಿದ ಉಕ್ಕಿನ ಮನುಷ್ಯ: ನರ್ಮದಾ ತಟದಲ್ಲಿ ವಿರಾಜಮಾನ

ದೇಶದ ಮೊದಲ ಗೃಹ ಸಚಿವ, ಸ್ವಾತಂತ್ರ್ಯಾನಂತರ 546 ಸಂಸ್ಥಾನಗಳನ್ನು ಭಾರತದೊಂದಿಗೆ ವಿಲೀನಗೊಳಿಸಿದ ಹಿರಿಮೆಯ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಪ್ರತಿಮೆಯನ್ನು ಬುಧವಾರ (ಅಕ್ಟೋಬರ್ 31) ಅನಾವರಣ ಮಾಡಲಾಗುತ್ತದೆ. ಅಂದು ಪಟೇಲ್ ಅವರ 142ನೇ ಜನ್ಮದಿನಾಚರಣೆಯೂ ಹೌದು. ಲೋಕಾರ್ಪಣೆಯ ನಂತರ ಜಗತ್ತಿನ ಅತಿ ಎತ್ತರದ ಪ್ರತಿಮೆ ಎಂಬ ಹೆಗ್ಗಳಿಕೆಗೆ ಈ 'ಏಕತಾ ಪ್ರತಿಮೆ' ಪಾತ್ರವಾಗಲಿದೆ.

ಪ್ರತಿಮೆ ಇರುವ ಸ್ಥಳ
ನರ್ಮದಾ ನದಿ

- ಪಟೇಲರ ಜೀವನಗಾಥೆ ಸಾರುವ ವಸ್ತುಸಂಗ್ರಹಾಲಯ
- 'ಲೇಸರ್ ಲೈಟ್' ಪ್ರದರ್ಶನ
- ಸರ್ದಾರ್ ಪಟೇಲ್, ಮಹಾತ್ಮ ಗಾಂಧಿ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಅವರ ಜೀವನ-ಸಾಧನೆಗಳ ಬಗ್ಗೆ ಅಧ್ಯಯನ ನಡೆಸಲು ಸಂಶೋಧನಾ ಕೇಂದ್ರ
- ಪ್ರತಿಮೆ ಸುತ್ತಲಿನ ಪ್ರದೇಶದಲ್ಲಿ ಜಲವಿಹಾರ
- ದೇಶದ ಎಲ್ಲಾ ರಾಜ್ಯಗಳ ಹೆಗ್ಗಳಿಕೆ ಮತ್ತು ಮಹತ್ವವನ್ನು ಸಾರುವ ಪ್ರದರ್ಶನ ಕೇಂದ್ರ
- ಪ್ರತಿಮೆಯ ಉದ್ದಕ್ಕೂ ಮೇಲಕ್ಕೇರುವ-ಇಳಿಯುವ ಲಿಫ್ಟ್ ವ್ಯವಸ್ಥೆ. ಪ್ರತಿಮೆ ಸುತ್ತಮುತ್ತಲಿನ ಪ್ರದೇಶ ಮತ್ತು ನರ್ಮದಾ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಸರ್ದಾರ್ ಸರೋವರ ಅಣೆಕಟ್ಟಿನ ವಿಹಂಗಮ ನೋಟ ಲಭ್ಯ

### ಲೋಹ ಅಭಿಯಾನ

'ಉಕ್ಕಿನ ಮನುಷ್ಯ'ನ ಪ್ರತಿಮೆ ನಿರ್ಮಾಣಕ್ಕೆ ಅಗತ್ಯವಿರುವ ಬಹುಪಾಲು ಲೋಹವನ್ನು ದೇಶದ ಎಲ್ಲಾ ಗ್ರಾಮಗಳಿಂದ ಸಂಗ್ರಹಿಸಲು 'ಲೋಹ ಅಭಿಯಾನ' ನಡೆಸಲಾಗಿತ್ತು. ರೈತರಿಂದ ಕೃಷಿ ಸಲಕರಣೆಗಳ ಲೋಹಗಳನ್ನು ಸಂಗ್ರಹಿಸಲಾಯಿತು. ಹೀಗೆ ಒಟ್ಟು 1.69 ಲಕ್ಷ ಲೋಹದ ತುಣುಕುಗಳನ್ನು ಸಂಗ್ರಹಿಸಿ, ಅದನ್ನು ಪ್ರತಿಮೆ ನಿರ್ಮಾಣದಲ್ಲಿ ಬಳಸಲಾಗಿದೆ

₹2,300 ಕೋಟಿ
ಪ್ರತಿಮೆ ನಿರ್ಮಾಣದ ವೆಚ್ಚ

ಪ್ರತಿಮೆ ನಿರ್ಮಾಣಕ್ಕೆ ತಗಲಿದ ಸಮಯ 33 ತಿಂಗಳು

ಸರ್ದಾರ್ ಸರೋವರ ಅಣೆಕಟ್ಟೆಯಿಂದ 3.5 ಕಿ.ಮೀ. ದೂರದಲ್ಲಿ ನರ್ಮದಾ ದಡದಲ್ಲಿದೆ

ತಾಸಿಗೆ 180 ಕಿ.ಮೀ. ವೇಗದಲ್ಲಿ ಗಾಳಿ ಬೀಸಿದರೂ ಪ್ರತಿಮೆ ತಡೆದುಕೊಳ್ಳಬಲ್ಲದು

11 ವರ್ಷ
ಚೀನಾದ ಸ್ಪ್ರಿಂಗ್ ಟೆಂಪಲ್ ಬುದ್ಧ ಪ್ರತಿಮೆ ನಿರ್ಮಾಣಕ್ಕೆ ತೆಗೆದುಕೊಂಡಿದ್ದ ಸಮಯ

### ಬೇರೆಲ್ಲಾ ಪ್ರತಿಮೆಗಳಿನ್ನು ಕುಬ್ಜ-ಕುಬ್ಜ

38 ಮೀಟರ್ ಕ್ರೈಸ್ಟ್ ದಿ ರಿಡೀಮರ್, ಬ್ರೆಜಿಲ್
85 ಮೀಟರ್ ಮದರ್‌ಲ್ಯಾಂಡ್ ಕಾಲ್ಸ್, ರಷ್ಯಾ
93 ಮೀಟರ್ ಸ್ಟ್ಯಾಚ್ಯು ಆಫ್ ಲಿಬರ್ಟಿ, ಅಮೆರಿಕ
120 ಮೀಟರ್ ಉಶಿಕು ದಯಬುತ್ಸು, ಜಪಾನ್
153 ಮೀಟರ್ ಸ್ಪ್ರಿಂಗ್ ಟೆಂಪಲ್ ಬುದ್ಧ, ಚೀನಾ
182 ಮೀಟರ್ ಏಕತಾ ಪ್ರತಿಮೆ

ಆಧಾರ: ಪಿಟಿಐ, www.statueofunity.in

PRESS INFORMATION BUREAU
GOVERNMENT OF INDIA
BENGALURU
****

| Name of the Paper | Praja Vani |
|---|---|
| Language: Kannada | Date 29-10-18 |
| Place :Bangalore | Periodicity: Daily |
| Clipping on_ Sardar Patel Statue | |
| Headline_ integrated India is a gift of Patel : Modi | |



ಸುದ್ದಿ 2 ನಿಮಿಷ

# ಏಕೀಕೃತ ಭಾರತ ಸರ್ದಾರ್ ಪಟೇಲ್ ಕೊಡುಗೆ: ಮೋದಿ

ನವದೆಹಲಿ (ಪಿಟಿಐ): ದೇಶ ವಿಭಜನೆಯ ನಂತರ ಜಮ್ಮು ಮತ್ತು ಕಾಶ್ಮೀರವು ಭಾರತದ ಅವಿಭಾಜ್ಯ ಅಂಗವಾಗಿ ಉಳಿಯಲು ಸರ್ದಾರ್ ವಲ್ಲಭಭಾಯ್ ಪಟೇಲ್ ಅವರ ಸಕಾಲಿಕ ಮತ್ತು ದಿಟ್ಟ ನಿರ್ಧಾರ ಕಾರಣ ಎಂದು ಪ್ರಧಾನಿ ನರೇಂದ್ರ ಮೋದಿ ಶ್ಲಾಘಿಸಿದ್ದಾರೆ.

ಭಾನುವಾರ ಪ್ರಸಾರವಾದ ಧ್ವನಿಮುದ್ರಿತ 'ಮನದ ಮಾತು' ತಿಂಗಳ ರೇಡಿಯೊ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸರ್ದಾರ್ ಪಟೇಲ್ ಇಲ್ಲದೆ ಭಾರತದ ಏಕೀಕರಣ ಊಹಿಸುವುದು ಸಾಧ್ಯವಿರಲಿಲ್ಲ. ಜುನಾಗಡ, ಹೈದರಾಬಾದ್, ತಿರುವಾಂಕೂರು, ರಾಜಸ್ಥಾನ, ಜಮ್ಮು ಮತ್ತು ಕಾಶ್ಮೀರದಂತಹ ಸಂಸ್ಥಾನಗಳನ್ನು ಭಾರತದಲ್ಲಿ ವಿಲೀನಗೊಳಿಸುವಲ್ಲಿ ಅವರ ಪ್ರಯತ್ನ ನಮಗೆಲ್ಲ ಮಾದರಿ ಎಂದು ಸ್ಮರಿಸಿದರು.

'ಇಂದು ನಾವು ನೋಡುತ್ತಿರುವ ಸುಂದರ ಏಕೀಕೃತ ಭಾರತವು ಪಟೇಲ್ ಅವರ ಧೀಮಂತ ವ್ಯಕ್ತಿತ್ವ, ತಂತ್ರಗಾರಿಕೆ, ಚಾಣಾಕ್ಷ ಧೈರ್ಯದ ಫಲ' ಎಂದು ಮೋದಿ ಶ್ಲಾಘಿಸಿದರು.

'ಅ.31ರಂದು ಲೋಕಾರ್ಪಣೆಯಾಗಲಿರುವ 'ಏಕತೆಯ ಮೂರ್ತಿ' ನಾವು ಅವರಿಗೆ ಸಲ್ಲಿಸಬಹುದಾದ ನಿಜವಾದ ಗೌರವ' ಎಂದರು. ಪಟೇಲ್ ಜಯಂತಿ ಅಂಗವಾಗಿ ಬುಧವಾರ ಆಯೋಜಿಸಲಾಗಿರುವ 'ಏಕತೆಗಾಗಿ ಓಟ'ದಲ್ಲಿ ಪಾಲ್ಗೊಳ್ಳುವಂತೆ ಯುವಕರಿಗೆ ಅವರು ಮನವಿ ಮಾಡಿದರು.

ಗುಜರಾತ್‌ನ ನರ್ಮದಾ ದಂಡೆಯ ಮೇಲಿರುವ ಏಕತಾ ಮೂರ್ತಿ ಹೊಸ ಆಕರ್ಷಕ ಪ್ರವಾಸಿ ತಾಣವಾಗಲಿದೆ ಎಂದರು. ಮಾಜಿ ಪ್ರಧಾನಿ ಇಂದಿರಾ ಗಾಂಧಿ ಪುಣ್ಯಸ್ಮರಣೆ ಅಂಗವಾಗಿ ಅವರ ಕೊಡುಗೆಯನ್ನು ಸ್ಮರಿಸಿದರು.